ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚನ್ನಪಟ್ಟಣ

CC No. 226/2016

CW - 1 PW - 1

| | | |
|---|---|---|
| ಹೆಸರು | ಃ | ಮಹಾಲಕ್ಷ್ಮಿ |
| ಗಂಡನ / ತಂದೆಯ ಹೆಸರು | ಃ | ಶ್ರೀನಿವಾಸಯ್ಯ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸ | ಃ | ಅಬ್ಬೂರು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 30.01.2021

1 ನೇ ಆರೋಪಿ ನನ್ನ ನಾದಿನಿ. 2 ನೇ ಆರೋಪಿ ನನ್ನ ಮಾವ. ದಿನಾಂಕ 31.11.2015 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ಮತ್ತು ಆರೋಪಿಗಳು ಮತ್ತು 1 ನೇ ಆರೋಪಿಯ ಗಂಡ ಮನೆಯಲ್ಲಿದ್ದಾಗ , 1 ನೇ ಆರೋಪಿಯ ಮನೆಯಲ್ಲಿ ಅಡುಗೆ ಮಾಡಲು ಅಕ್ಕಿ, ರಾಗಿ ಅಳತೆ ಮಾಡಿ ಕೊಡುತ್ತಿದ್ದರು. ಇದನ್ನು ನಾನು 1 ನೇ ಆರೋಪಿಗೆ ನೀನೇನು ನನ್ನ ಅತ್ತೆಯ ಅಳತೆ ಮಾಡಿ ಕೊಡಲು ಎಂದು ಕೇಳಿದಾಗ, 1 ನೇ ಆರೋಪಿ ಕುಡುಗೋಲಿನಿಂದ ನನ್ನ ಕತ್ತಿಗೆ ಹೊಡೆಯಲು ಬಂದಾಗ ನಾನು ನನ್ನ ಎಡ ಗೈ ಯನ್ನು ಅಡ್ಡ ಗಟ್ಟಿದಾಗ ನನ್ನ ಕೈ ಗೆ ಏಟಾಗಿತ್ತು. ಮನೆ ಹಾಗೂ ಜಮೀನು ನನ್ನದು ನಿನಗೆ ಯಾವ ಹಕ್ಕು ಅಧಿಕಾರ ಏನೂ ಇಲ್ಲ ಮನೆ ಬಿಟ್ಟು

ಹೊರಗಡೆ ಹೋಗು ಎಂದು ಹೇಳಿದರು. ಸದರಿ ಗಲಾಟೆಗೆ 2 ನೇ ಆರೋಪಿ ಬೆಂಬಲ ನೀಡಿದರು. ನಂತರ ನಾನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ದಿನಾಂಕ 01.01.2015 ರಂದು ಬೆಳಿಗ್ಗೆ 10.00 ಗಂಟೆಗೆ ಹೋಗಿದ್ದೆ. ನಂತರ ನಾನು ಆಸ್ಪತ್ರೆಯಲ್ಲಿ 15 ದಿನಗಳ ಕಾಲ ದಾಖಲಾಗಿದ್ದು ಹಾಗೂ ಪೋಲಿಸರು ಮಾರನೆಯ ದಿನ ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಯನ್ನು ಪಡೆದುಕೊಂಡರು. ಹೇಳಿಕೇಯಲ್ಲಿರುವ ಸಹಿ ನನ್ನದು. ಸದರಿ ಸಹಿಯನ್ನು ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಆರೋಪಿಗಳು ನನ್ನ ಪ್ರಾಣ ಬೆದರಿಕೆಯನ್ನು ಸಹ ಹಾಕಿದ್ದರು.

ಈಗ ತೋರಿಸುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ಸಹಿಯನ್ನು ಗುರುತಿಸಿದ ಮೇರೆಗೆ ಮಹಜರ್ ಅನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ನಾನು ಎಂ.ಕೆ. ದೊಡ್ಡಿ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕುಡುಗೋಲನ್ನು ನನಗೆ ಹೊಡೆಯಲು ಉಪಯೋಗಿಸಿಲ್ಲ ಅದು ಇನ್ನೊಂದು ಕುಡುಗೋಲಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ/ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

<u>ಪಾಟೀ ಸವಾಲು : ಎಪಿಪಿ ಯವರಿಂದ :</u>

ಗಲಾಟೆಯಾಗುವಾಗ ಆರೋಪಿಗಳು ನನಗೆ ಕೆಟ್ಟ ಶಬ್ದಗಳಿಂದ ಬೈದಿದ್ದರು ಎಂದರೆ ಸರಿ. ದಿನಾಂಕ 08.01.2016 ರಂದು ತೋಟದ ಮನೆಯ ಮುಂಭಾಗ ದಲ್ಲಿ ನಾನು ತೋರಿಸಿದ ಮೇರೆಗ ಸ್ಥಳವನ್ನು ಪರಿಶೀಲಿಸಿ ನಿಪಿ-2 ರಂತೆ ಮಹಜರ್ ಮಾಡಿದ್ದರು ಎಂದರೆ ಸರಿ. ನಿಪಿ-2 ಅನ್ನು ತಯಾರಿಸಿದಾಗ ನ್ಯಾಯಾಲಯದ ಮುಂದಿರುವ ಕುಡುಗೋಲನ್ನು ಅಮಾನತ್ತು ಪಡಿಸಿದ್ದರು ಎಂದರೆ ಸರಿಯಲ್ಲ.

<u>ಪಾಟೀ ಸವಾಲು : Sri. S.B.D. ವಕೀಲರಿಂದ:</u>

ನಾನು ಹೇಳುವಂತೆ 31.12.2015 ರಂದು ಗಲಾಟೆಯಾಗಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ನಡೆದ ದಿನ ನನಗೆ ಜ್ಞಾನ ತಪ್ಪಿದ ಕಾರಣ ನಾನು ಅದೇ ದಿನ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿಲ್ಲ. ಈ ವಿಚಾರವನ್ನು ನಾನು ಪೋಲಿಸರಿಗೆ ಹೇಳಿಕೆ ನೀಡಿದಾಗ ಹೇಳಿದ್ದೇನೆ. 1 ನೇ ಆರೋಪಿಯನ್ನು ಕೆಳಗೆರೆ ಗೆ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಆಕೆ ಅವಳ ಗಂಡನ ಮನೆಯಲ್ಲಿಯೇ ವಾಸ ಮಾಡುತ್ತಿದ್ದಾರೆ ಎಂದರೆ ಅವರು ವಾಸ ಮಾಡುತ್ತಿದ್ದರು. 2 ನೇ ಆರೋಪಿಗೆ ಸುಮಾರು 80 ವರ್ಷ ವಯಸ್ಸಾಗಿದೆ ಎಂದರೆ ಸರಿ. ನನ್ನ ಗಂಡನ ಆಸ್ತಿಯಲ್ಲಿ ನನಗೆ ಭಾಗ ಬೇಕು ಎಂದು ಹೇಳಿ ಆರೋಪಿಗಳ ವಿರುದ್ಧ ಈ ಕೇಸ್ ಅನ್ನು ದಾಖಲಿಸಿದ್ದೇನೆ ಎಂದರೆ ಸರಿ. 1 ನೇ ಆರೋಪಿ

ನನಗೆ ಕುಡುಗೋಲಿನಿಂದ ಹೊಡೆದಿಲ್ಲ, ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ದೂರು ನೀಡಿದಾಗ ಪೋಲಿಸರಿಗೆ ಆರೋಪಿಗಳು ನನಗೆ ಕೊಲೆ ಬೆದರಿಕೆ ಹಾಕಿದ್ದರು ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ನಿಪಿ-2 ಅನ್ನು ಪೋಲಿಸರು ನನಗೆ ಓದಿ ಹೇಳಿದ್ದಾರೆ. ನನಗೆ ಹೊಡೆದಿದ್ದ ವಿಚಾರವನ್ನು ನಿಪಿ-2 ರಲ್ಲಿ ಬರೆದಿದ್ದಾರೆ. ನಾನು ಮನೆಯಲ್ಲಿ ಕೆಲಸ ಮಾಡುತ್ತಿರುವ ಸಂದರ್ಬದಲ್ಲಿ ಬಿದ್ದು ಕೈ ಗೆ ಏಟು ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ನನಗೆ ಬಿಪಿ, ಶುಗರ್ ಇಲ್ಲ. ನನ್ನ ಗಂಡನ ಭಾಗ ಬೇಕು ಎಂದು ಹೇಳಿ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ